ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 87-93
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಕಾಯಿದೆ–2017 (ಕೆ.ಪಿ.ಎಂ.ಇ. ಆ್ಯಕ್ಟ್): ಒಂದು ವಿಶ್ಲೇಷಣೆ

**ವೆಂಕಟಚಲಪತಿ ಹೆಚ್.ವಿ[1] ಮತ್ತು ಡಾ.ಎನ್.ಶೇಕ್ ಮಸ್ತಾನ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಶ್ರೇಣಿ ಪ್ರಾಧ್ಯಾಪಕರು (ನಿವೃತ್ತ)
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**Abstract:**
*ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯಿದೆಯನ್ನು (ಕೆ.ಪಿ.ಎಂ.ಇ. ಆ್ಯಕ್ಟ್) ಕರ್ನಾಟಕ ರಾಜ್ಯದ ಖಾಸಗಿ ಒಡೆತನದಲ್ಲಿರುವ ಆಸ್ಪತ್ರೆಗಳು, ಚಿಕಿತ್ಸಾ ಕೇಂದ್ರಗಳು, ನರ್ಸಿಂಗ್ ಹೋಮ್ಸ್, ಲ್ಯಾಬ್ ಮತ್ತು ಡಯಾಗ್ನೋಸ್ಟಿಕ್ ಕೇಂದ್ರಗಳ ಸ್ಥಾಪನೆಗೆ, ನವೀಕರಣಕ್ಕೆ ಪರವಾನಗಿ ನೀಡಲು ಮತ್ತು ಮೇಲ್ವಿಚಾರಣೆ ಮಾಡಿ, ನಿಯಂತ್ರಿಸುವ ಉದ್ದೇಶದಿಂದ ರಚಿಸಿರುವ ಕಾಯಿದೆಯಾಗಿದೆ. ಈ ಕಾಯಿದೆಯನ್ನು ರಚಿಸುವ, ತಿದ್ದುಪಡಿ ಮಾಡುವ, ಅನುಷ್ಠಾನಗೊಳಿಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯದ್ದಾಗಿರುತ್ತದೆ. ಈ ಲೇಖನವನ್ನು ಸಿದ್ಧಪಡಿಸಲು ಪ್ರಾಥಮಿಕ ಆಕರಗಳು ಮತ್ತು ದ್ವೀತಿಯ ಆಕರಗಳನ್ನ ಬಳಸಲಾಗಿದೆ. ಹಾಗೆಯೇ ಕರ್ನಾಟಕ ಸರ್ಕಾರದ ಬಜೆಟ್ ವರದಿಗಳು, ಇಲಾಖಾ ವರದಿಗಳು, ದೃಶ್ಯ ಮಾಧ್ಯಮದ ಚರ್ಚೆಗಳು ಮತ್ತು ಸಂದರ್ಶನದ ಮೂಲಕ ಮಾಹಿತಿಯನ್ನು ಸಂಗ್ರಹಿಸಿ, ಈ ಲೇಖನ ಸಿದ್ಧಪಡಿಸಲಾಗಿದೆ.*

**Keywords:** *ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯಿದೆ, ಕೆ.ಪಿ.ಎಂ.ಇ. ಆ್ಯಕ್ಟ್, ಆಸ್ಪತ್ರೆಗಳು, ಚಿಕಿತ್ಸಾ ಕೇಂದ್ರಗಳು, ನರ್ಸಿಂಗ್ ಹೋಮ್ಸ್, ಕೆ.ಆರ್. ರಮೇಶ್ ಕುಮಾರ್*

## ಪೀಠಿಕೆ

ಸಾಮಾನ್ಯವಾಗಿ ಯಾವುದೇ ಕಾಯಿದೆಗಳನ್ನು ಬದಲಾದ ಕಾಲಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡುವುದು ಸೂಕ್ತವಾಗುತ್ತದೆ. ಅದರಂತೆ ಶ್ರೀ ಕೆ. ಆರ್. ರಮೇಶ್ ಕುಮಾರ್ ರವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲಿಗೆ ಆದ್ಯತೆ ನೀಡಿದ್ದು, 2007 ರ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯಿದೆಯನ್ನು ತಿದ್ದುಪಡಿ ಮಾಡುವುದರ ಕುರಿತು. ಅದರಲ್ಲಿದ್ದ ಸಮಸ್ಯೆ ಮತ್ತು ಸವಾಲುಗಳನ್ನ ಅರಿತು ನ್ಯೂನತೆಗಳನ್ನ ಸರಿಪಡಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಿಟ್ಟರು. 2007ರ ಕಾಯ್ದೆ ಹತ್ತು ವರ್ಷ ಪೂರೈಸಿರುವುದರಿಂದ ಅದರ ಸಾಧಕ ಬಾಧಕಗಳನ್ನ ಚರ್ಚಿಸಿ ಮತ್ತು ಅದರ ದೋಷಗಳನ್ನು ನಿವಾರಿಸಿ ಸದೃಢ ಕಾಯಿದೆಯನ್ನಾಗಿ ರೂಪಿಸಲು, ತಿದ್ದುಪಡಿ ಮಾಡಲು ಕಾರ್ಯ ಮಗ್ನರಾದರು ಅದರಂತೆ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಬಳಿ ಚರ್ಚಿಸಿ ಅದಕ್ಕೆ ಬೇಕಾದ ಪೂರ್ವ ತಯಾರಿಯನ್ನು ಪ್ರಾರಂಭಿಸಿದರು.

***Please cite this article as:*** ವೆಂಕಟಚಲಪತಿ ಹೆಚ್.ವಿ ಮತ್ತು ಎನ್. ಶೇಕ್ ಮಸ್ತಾನ್. (2026). ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಕಾಯಿದೆ–2017 (ಕೆ.ಪಿ.ಎಂ.ಇ. ಆ್ಯಕ್ಟ್): ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(6), 87–93

**ಶ್ರೀ ಕೆ.ಆರ್. ರಮೇಶ್ ಕುಮಾರ್ ರವರ ಪರಿಚಯ**

ಶ್ರೀ ಕೆ.ಆರ್. ರಮೇಶ್ ಕುಮಾರ್ ರವರು ಐದು ದಶಕಗಳಿಂದ ಕರ್ನಾಟಕದ ರಾಜಕಾರಣದಲ್ಲಿದ್ದು ನೇರನುಡಿ, ಸರಳ ವ್ಯಕ್ತಿತ್ವ, ಪ್ರಗತಿಪರ ಚಿಂತಕ, ದೂರದೃಷ್ಟಿಯ ನೇತಾರ, ಬದ್ದತೆಯ ರಾಜಕಾರಣಿಯಾಗಿ ಗುರ್ತಿಸಿಕೊಂಡಿದ್ದಾರೆ. ಇವರು 22 ನೇ ನವೆಂಬರ್ 1949 ರಂದು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಅಡ್ಡಗಲ ಗ್ರಾಮದಲ್ಲಿ ಬ್ರಾಹಣ ಸಮುದಾಯದ ಸಾಮಾನ್ಯ ಕುಟುಂಬದಲ್ಲಿ ಜನಿಸಿದರು. ಬೆಂಗಳೂರಿನಲ್ಲಿ ಪದವಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಒಮ್ಮೆ ಮಾನ್ಯ ದೇವರಾಜ್ ಅರಸು(ಮಾಜಿ ಮುಖ್ಯಮಂತ್ರಿಗಳು) ರವರನ್ನು ಬೇಟಿಯಾಗಿದ್ದರು. ಇದಾದ ಮೇಲೆ ಅವರ ಪ್ರಭಾವಕ್ಕೆ ಒಳಗಾಗಿ, ಅವರ ಪ್ರೋತ್ಸಾಹದಿಂದ ರಾಜಕಾರಣಕ್ಕೆ ಪ್ರವೇಶ ಮಾಡಿದರು. ಶ್ರೀ ರಮೇಶ್ ಕುಮಾರ್‌ರವರು ಇದುವರೆಗೂ 6 ಬಾರಿ ಶಾಸಕರಾಗಿ, ಕರ್ನಾಟಕ ವಿಧಾನಸಭೆಯ 14ನೇ ಸ್ಪೀಕರ್ ಆಗಿ 27 ಡಿಸೆಂಬರ್ 1994 ರಿಂದ 24 ಅಕ್ಟೋಬರ್ 1999 ನಡುವೆ ಜನತಾದಳ ಸರ್ಕಾರದಿಂದ ಆಯ್ಕೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಹಾಗೆಯೇ 21ನೇ ಸ್ಪೀಕರ್ ಆಗಿ ಮತ್ತೊಮ್ಮೆ 25 ಮೇ 2018 ರಿಂದ 29 ಜುಲೈ 2019ರ ವರೆಗೂ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಸಂಮಿಶ್ರ ಸರ್ಕಾರದಲ್ಲಿ ಆಯ್ಕೆಯಾಗಿ ತಮ್ಮ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಜೂನ್ 2016 ರಿಂದ ಮೇ 2018 ರ ವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾಗಿ ಸೇವೆ ಸಲ್ಲಿಸಿದರು.[1] ಈ ಅವಧಿಯಲ್ಲಿ ಇಲಾಖೆಯ ದಕ್ಷತೆ ಹೆಚ್ಚಿಸಿ ಮೌಲ್ಯಯುತವಾದ ಸುಧಾರಣೆಗಳನ್ನು ತಂದು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಬಹುತೇಕ ಎಲ್ಲಾ ಯೋಜನೆಗಳು ಬಡ ಮತ್ತು ಮದ್ಯಮ ವರ್ಗಗಳಿಗೆ ಪ್ರಯೋಜನಕಾರಿಯಾಗುವಂತಹವೇ ಆಗಿವೆ. ಪ್ರಸ್ತುತ ಕಾಲಘಟ್ಟದ ಅವಶ್ಯಕತೆಗಳಿಗೆ ಅನುಗುಣವಾಗಿ ಆಸ್ಪತ್ರೆಗಳನ್ನ ಉನ್ನತೀಕರಿಸಿದರು.

**ತಿದ್ದುಪಡಿಯ ಉದ್ದೇಶಗಳು**

- ಈ ಹಿಂದಿನ ಕಾಯ್ದೆಗಳಲ್ಲಿ ನಿಯಮಗಳನ್ನು ಖಾಸಗಿ ಸಂಸ್ಥೆಗಳಿಗೆ ಅಳವಡಿಸಿ ಜಾರಿ ಮಾಡಲು ಕಠಿಣ ಉಪಬಂಧಗಳು ಇಲ್ಲದೇ ಇರುವುದು.
- ಆಲೋಪತಿ ವೈದ್ಯ ಪದ್ಧತಿಯನ್ನು ಹೊರತುಪಡಿಸಿ ಇತರೆ ವೈದ್ಯ ಪದ್ಧತಿಗಳು ಕಾಯ್ದೆಯ ವ್ಯಾಪ್ತಿಯಲ್ಲಿ ಇಲ್ಲದಿರುವುದು.
- ರಾಜ್ಯಮಟ್ಟದಲ್ಲಿ ನಿಯಂತ್ರಣ ಪ್ರಾಧಿಕಾರ ಇಲ್ಲದೆ ಇರುವುದು.
- ವೈಜ್ಞಾನಿಕ ಮತ್ತು ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಳ್ಳುವುದು.
- ದತ್ತಾಂಶಗಳನ್ನು ಪಡೆದು ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ಹಂಚಿಕೊಳ್ಳುವುದು
- ವಿವಿಧ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಸ್ಪಷ್ಟವಾಗಿ ದಂಡನ ಉಪಬಂಧಗಳನ್ನು ನಿಗದಿಪಡಿಸುವುದು.
- ಗುಣಮಟ್ಟದ ಚಿಕಿತ್ಸೆಯನ್ನ ನೀಡಲು ಮಾರ್ಗಸೂಚಿಗಳನ್ನು ರಚಿಸುವುದು
- ರೋಗಿಗಳಿಂದ ಬರುವಂತಹ ದೂರುಗಳನ್ನು ನಿವಾರಿಸಲು ಆಸ್ಪತ್ರೆಗಳಲ್ಲಿ ಸಮಿತಿ ರಚಿಸುವುದು
- ಅಪಘಾತಕ್ಕೀಡಾಗಿ ತುರ್ತು ಪರಿಸ್ಥಿತಿಯಲ್ಲಿರುವ ರೋಗಿಗಳನ್ನು ಆಸ್ಪತ್ರೆಗೆ ಸೇರಿಸಿಕೊಂಡು ಅವರ ಆಸ್ಪತ್ರೆಗೆ ಅನುಗುಣವಾಗಿ ಸೂಕ್ತ ಚಿಕಿತ್ಸೆ ನೀಡಿ ತುರ್ತು ಪರಿಸ್ಥಿತಿಯಿಂದ ಹೊರಬರುವಂತೆ ಮಾಡುವುದು.
- ವೈದ್ಯರುಗಳು ತಮ್ಮ ಕರ್ತವ್ಯದಲ್ಲಿ ನಿಯಮಬಾಹಿರ ಚಟುವಟಿಕೆಗಳನ್ನು ಮಾಡದಂತೆ ತಡೆಗಟ್ಟುವುದು.
- ಸರ್ಕಾರದ ಸಮಗ್ರ ಆರೋಗ್ಯ ರಕ್ಷಣೆ ಯೋಜನೆಯಲ್ಲಿ ಖಾಸಗಿ ಆಸ್ಪತ್ರೆಗಳು ಪಾಲ್ಗೊಳ್ಳುವಂತೆ ಮಾಡುವುದು.[2]

- ಅನೇಕ ಖಾಸಗಿ ಆಸ್ಪತ್ರೆಗಳನ್ನ ಮತ್ತು ವೈದ್ಯಕೀಯ ಸಂಸ್ಥೆಗಳನ್ನು ವಿಮಾ ಕಂಪನಿಗಳು
- ಕಪ್ಪುಪಟ್ಟಿಗೆ ಸೇರಿಸಿರುವುದು.
- ಸಾರ್ವಜನಿಕರಿಂದ ಅಧಿಕ ದರ ವಸೂಲಿಯ ದೂರುಗಳು ಬರುತ್ತಿರುವುದು.
- ವೈದ್ಯಕೀಯ ನಿರ್ಲಕ್ಷದ ಪ್ರಕರಣಗಳನ್ನು ನಿಯಂತ್ರಿಸುವುದು.

ಈ ರೀತಿಯ ಅನೇಕ ಸಮಸ್ಯೆಗಳು ಕುಂದು ಕೊರತೆಗಳು ಇರುವುದರಿಂದ ಅವೆಲ್ಲದಕ್ಕೂ ಒಂದು ಪರಿಹಾರವೆಂದರೆ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸುವುದರ ಜೊತೆಗೆ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ನಿಯಂತ್ರಿಸಿ ಅವುಗಳನ್ನ ಸಾಮಾನ್ಯ ಜನರಿಗೆ ಕೈಗೆಟುಕುವಂತೆ ಮಾಡುವುದಾಗಿತ್ತು. ಈ ಮಹೋನ್ನತ ಉದ್ದೇಶದಿಂದ ಅಂದಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀ ಕೆ. ಆರ್. ರಮೇಶ್ ಕುಮಾರ್ ರವರು ಕೆ.ಪಿ.ಎಂ.ಇ. ಕಾಯಿದೆಯ ತಿದ್ದುಪಡಿಗೆ, ನೀತಿ ನಿಯಮಗಳನ್ನ ರೂಪಿಸುವ ಬಗ್ಗೆ, ಶಿಫಾರಸ್ಸನ್ನು ಮಾಡಲು ಶ್ರೀ ವಿಕ್ರಮಜಿತ್ ಸೇನ್, ನಿವೃತ್ತ ಮುಖ್ಯ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ, ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದರು.[3] ಅವರು ನೀಡಿದ ವರದಿಯನ್ನು ಪಡೆದುಕೊಂಡು ಚರ್ಚೆಗೆ ಒಳಪಡಿಸಿ ನಂತರ Karnataka Private Medical Establishments (Amendment) Act 2017ರ ತಿದ್ದುಪಡಿ ವಿಧೇಯಕವನ್ನು 14ನೇಯ ವಿಧಾನಸಭೆ ಅಧಿವೇಶನದ ಜೂನ್ 20, 2017 ರಂದು ವಿಧಾನಸಭೆಯಲ್ಲಿ ಅದನ್ನ ಮಂಡಿಸಿ ಸದನದ ಪರ್ಯಾಲೋಚನೆಗೆ ಬಿಡಲಾಯಿತು.[4]

ಸದನದಲ್ಲಿ ಶಾಸಕರು, ಮಂತ್ರಿಗಳು ಅವರವರ ಅಭಿಪ್ರಾಯಗಳನ್ನು ತಿಳಿಸಿ ಅದನ್ನ ಮತ್ತಷ್ಟು ಸುಧಾರಿಸಲು ಮತ್ತು ಸರ್ಕಾರ ಹಾಗೂ ಖಾಸಗಿಯವರ ನಡುವೆ ಸಮಾನಾಂತರ ಸಂಬಂಧವನ್ನು ಏರ್ಪಡಿಸಿಕೊಳ್ಳುವಂತೆ, ಅನೇಕ ಸಲಹೆಗಳನ್ನು ನೀಡಿದರು. ಖಾಸಗಿ ವೈದ್ಯರು ಮತ್ತು ವೈದ್ಯಕೀಯ ಸಂಸ್ಥೆಗಳು ಈ ಕಾಯ್ದೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರಿಂದ ಈ ಕಾಯ್ದೆಯನ್ನು ಮತ್ತಷ್ಟು ವಿಸ್ತಾರವಾಗಿ ಚರ್ಚಿಸಿ ಪರಿಪಕ್ವಗೊಳಿಸಲು, ಪರಾಮರ್ಶಿಸಲು ಜಂಟಿ ಸದನ ಸಮಿತಿಗೆ ಒಪ್ಪಿಸುವಂತೆ ಅಭಿಪ್ರಾಯಗಳು ಬಂದವು. ಆದ್ದರಿಂದ ಜಂಟಿ ಸದನ ಸಮಿತಿಗೆ (ಶ್ರೀ ಕೆ.ಎನ್.ರಾಜಣ್ಣನವರ ನೇತೃತ್ವದ) ವಿಸ್ತೃತ ಚರ್ಚೆಗೆ ಒಪ್ಪಿಸಲಾಯಿತು.[5] ಕೊನೆಗೆ ನಾನಾ ಹಂತಗಳಲ್ಲಿ ಚರ್ಚೆಗೆ ಒಳಗಾಗಿ ಎಲ್ಲಾ ಆಕ್ಷೇಪಣೆಗಳನ್ನು ಪರಿಗಣಿಸಿ ಅದನ್ನು ಮಾರ್ಪಾಡು ಮಾಡಿ, 15ನೇ ಅಧಿವೇಶನದ ದಿನಾಂಕ 22 ನವೆಂಬರ್ 2017 ರಂದು ಮತ್ತೊಮ್ಮೆ ಮಂಡಿಸಿ ಸದನದ ಪರ್ಯಾಲೋಚನೆಗೆ ಬಿಡಲಾಯಿತು. ಅನೇಕ ಜನಪ್ರತಿನಿಧಿಗಳು ನಾನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಅದನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಲು ತಿಳಿಸಿದರು. ನಂತರ ಅದೇ ದಿನ ಸದನದ ಬಹುಮತದೊಂದಿಗೆ ಈ ಒಂದು ವಿಧೇಯಕ ಮಸೂದೆ ಪಾಸ್ ಆಯಿತು.[6] ನಂತರ ಡಿಸೆಂಬರ್‌ನಲ್ಲಿ ರಾಜ್ಯಪಾಲರ ಅಂಕಿತದೊಂದಿಗೆ Karnataka Private Medical Establishment Act 2017 ಎಂಬ ಕಾಯಿದೆಯಾಗಿ ಜಾರಿಗೆ ಬಂದಿತು.

**ಈ ಕಾಯಿದೆಯ ಮಹತ್ವದ ಅಂಶಗಳು**

- ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಸರ್ಕಾರಗಳ ಅಧೀನದಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳ ಆವರಣದಿಂದ 200 ಮೀಟರುಗಳ ಒಳಗೆ ಯಾವುದೇ ಹೊಸ ಖಾಸಗಿ ಚಿಕಿತ್ಸಾ ಪ್ರಯೋಗಾಲಯಕ್ಕೆ ಅನುಮತಿಯನ್ನು ನೀಡುವಂತಿಲ್ಲ.
- ಆಸ್ಪತ್ರೆಯ ಸ್ವಾಗತ ಕೋಣೆಯಲ್ಲಿ ಎದ್ದುಕಾಣುವ ಸ್ಥಳದಲ್ಲಿ ಸೂಚನಾ ಫಲಕದಲ್ಲಿ ಚಿಕಿತ್ಸೆಗಳ ವಿಧಾನಗಳು, ಸೇವೆಯ ದರಗಳನ್ನು ಪ್ರದರ್ಶಿಸುವುದು.

- ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ಮುಂಗಡವನ್ನು ಪಾವತಿಸಲು ಒತ್ತಾಯಪಡಿಸದೇ, ಅವಶ್ಯವಾಗಿರುವ ಪ್ರಥಮ ಚಿಕಿತ್ಸೆಯನ್ನು ನೀಡುವುದು.
- ರೋಗಿಯು ಮೃತನಾದ ಸಂದರ್ಭದಲ್ಲಿ, ಆಸ್ಪತ್ರೆಯ ಬಾಕಿ ಮೊತ್ತವನ್ನು ಪಾವತಿಸಲು ಒತ್ತಾಯಪಡಿಸದೇ ಮೃತದೇಹವನ್ನು ಗೌರವಯುತವಾಗಿ ಅವರ ಕುಟುಂಬಕ್ಕೆ ನೀಡುವುದು. ಮೃತ ವ್ಯಕ್ತಿಯು ಯಾವುದೇ ಆರೋಗ್ಯ ಯೋಜನೆಯ ಅಡಿಯಲ್ಲಿ ದಾಖಲಾಗಿದ್ದರೇ, ಅದರ ಮಾನದಂಡಗಳ ಅನುಸಾರ ಮೊತ್ತವನ್ನು ಪಡೆಯುವುದು. ಸರ್ಕಾರದಿಂದ ಮರುಭರ್ತಿಯಾಗಬಹುದಾದ ಮೊತ್ತಕ್ಕೆ ಮೀರಿದ ಮೊತ್ತವನ್ನು ಕಾನೂನಿನ ಅನುಸಾರನಾಗಿ ಮೃತನ ಪ್ರತಿನಿಧಿಗಳಿಂದ ವಸೂಲಿ ಮಾಡಿಕೊಳ್ಳುವುದು.
- ರೋಗಿಯ ಚಾರ್ಟರ್ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರ್‌ನಲ್ಲಿ ನಿರ್ದಿಷ್ಟಪಡಿಸಿರುವ ಹಕ್ಕುಗಳು ಮತ್ತು ಕರ್ತವ್ಯಗಳನ್ನು ರೋಗಿ ಅಥವಾ ಅಧಿಕೃತ ಕುಟುಂಬದ ಸದಸ್ಯರು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಯು ಹೊಂದಿರುತ್ತದೆ.
- ನಿಗದಿಪಡಿಸಿದ ಸೇವದರಕ್ಕಿಂತ ಹೆಚ್ಚಿನ ಶುಲ್ಕ ವಸೂಲಿಯಾಗಿದ್ದರೇ, ರೋಗಿಯು ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ದೂರನ್ನು ನೀಡಬಹುದು. ಅದು ಸಾಬೀತಾದರೇ ವಿಧಿಸಿದ ಹೆಚ್ಚಿನ ಶುಲ್ಕ ಮೊತ್ತಕ್ಕಿಂತ ಒಂದೂವರೆಪಟ್ಟು ಮೊತ್ತಕ್ಕೆ ಸಮನಾದ ದಂಡವನ್ನು ವಿಧಿಸುವುದು. ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರನೇ ಬಾರಿಗೆ ಉಲ್ಲಂಘಿಸಿರುವುದು ಕಂಡುಬಂದಲ್ಲಿ ಪ್ರಾಧಿಕಾರವು ಸಂಬಂಧಪಟ್ಟ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸುವುದು. ಅಪರಾಧ ಸಾಬೀತಾದಲ್ಲಿ ವಿಧಿಸಿದ ಹೆಚ್ಚಿನ ಶುಲ್ಕ ಮೊತ್ತದ ಮೂರರಷ್ಟು ಮೊತ್ತ ಅಥವಾ ಒಂದು ಲಕ್ಷ ರೂಪಾಯಿಗಳ ಮೊತ್ತ ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತದಷ್ಟು ದಂಡವನ್ನು ವಿಧಿಸುವುದು.
- ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದಿಂದ ಅಥವಾ ಇದಕ್ಕಾಗಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯು ಲಿಖಿತ ದೂರನ್ನು ನೀಡದ ಹೊರತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ನ್ಯಾಯಾಲಯ ಅಪರಾಧದ ಸಂಜ್ಞೇಯತೆಯನ್ನು ಕೈಗೊಳ್ಳುವಂತಿಲ್ಲ.
- ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ಹೊರತು ಯಾವುದೇ ದಂಡಾಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಅಪರಾಧದ ವಿಚಾರಣೆಯನ್ನು ಮಾಡುವಂತಿಲ್ಲ.[7]

**ಕಾಯಿದೆಯ ವಿವಾದ**

ಕರ್ನಾಟಕದ 14ನೇ ವಿಧಾನಸಭೆಯ 15ನೇ ಅಧೀವೇಶನದಲ್ಲಿ (ನವೆಂಬರ್–2017) ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ–2017 ಮಂಡನೆಯಾಗಲಿದೆ ಎಂದು ಭಾವಿಸಿಲಾಗಿತ್ತು. ಖಾಸಗಿ ವೈದ್ಯಕೀಯ ಸಂಸ್ಥೆಗಳು, ಮೆಡಿಕಲ್ ಸ್ಟೋರ್ ಮಾಲೀಕರು, ಖಾಸಗಿ ಲ್ಯಾಬ್‌ಗಳು ತಮ್ಮ ಸೇವೆಯನ್ನು ನಿಲ್ಲಿಸುವ ಮೂಲಕ ಅಧೀವೇಶನ ಸೇರುವುದಕ್ಕೆ ಮುಂಚಿತವಾಗಿಯೇ ಪ್ರತಿರೋದ ವ್ಯಕ್ತಪಡಿಸಿದವು. ಬೆಳಗಾವಿಯ ಸುವರ್ಣಸೌಧದಲ್ಲಿ ಅಧೀವೇಶನ (13–11–2017 ರಿಂದ 24–11–2017 ವರೆಗೆ) ಪ್ರಾರಂಭವಾದಾಗ ಅದರ ಬಳಿಯಲ್ಲಿ ಖಾಸಗಿ ಆಸ್ಪತ್ರೆಯ ವೈದ್ಯರು, ಲ್ಯಾಬೋರೇಟರಿಯ ತಂತ್ರಜ್ಞರು, ರೇಡಿಯೋಲಜಿಯ ವೈದ್ಯರು ಎಲ್ಲಾರು ತಮ್ಮ ಸೇವೆಗಳನ್ನು ನಿಲ್ಲಿಸಿ 5 ದಿನಗಳ ಕಾಲ ಮುಷ್ಕರ ಹೂಡಿದರು.

ಮುಷ್ಕರದ ಪರಿಣಾಮ ಖಾಸಗಿ ಆರೋಗ್ಯ ಸೇವೆಗಳಲ್ಲಿ ವ್ಯತ್ಯಾಯ ಉಂಟಾಗಿ ಕೆಲ ರೋಗಿಗಳು ತುರ್ತು ಚಿಕಿತ್ಸೆ ಸಿಗದೇ ಮರಣ ಹೊಂದಿದರು, (22–11–2017 25–30 ಜನ) ಆದರೂ ಮುಷ್ಕರವು ಮುಂದುವರೆದಿತ್ತು. ಮಾನ್ಯ ಕರ್ನಾಟಕ ಉಚ್ಚನ್ಯಾಯಲಯವು ಮುಷ್ಕರದ ಬಗ್ಗೆ ಬೇಸರ ವ್ಯಕ್ತಪಡಿಸಿತ್ತು. ಕೊನೆಗೆ ಸರ್ಕಾರವು ವಿಧೇಯಕದಲ್ಲಿದ್ದ ನಿಯಮಗಳಾದ, ವೈದ್ಯಕೀಯ ನಿರ್ಲಕ್ಷ್ಯದಿಂದ ಸಾವು ಸಂಭವಿಸಿದರೇ 1 ರಿಂದ 3 ವರ್ಷಗಳು ಜೈಲು ಶಿಕ್ಷೆ ಎಂಬುದನ್ನು ಹಿಂತೆಗೆದು ಕೊಳ್ಳಲಾಯಿತು ಮತ್ತು ದಂಡದ ಪ್ರಮಾಣವನ್ನು ತಗ್ಗಿಸಿ ಗರಿಷ್ಠ 1 ಲಕ್ಷಕ್ಕೆ ನಿಗದಿಪಡಿಸಲಾಯಿತು. ಸರ್ಕಾರ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ನಡುವೆ ಮಾತುಕತೆ ನಡೆದು ಮುಷ್ಕರ ಹಿಂತೆಗೆದುಕೊಳ್ಳಲಾಯಿತು.

ಈ ಕಾಯಿದೆಯ ವಿರುದ್ಧ ಖಾಸಗಿ ಎಕ್ಸರೇ ಸಿಬ್ಬಂದಿ, ಪ್ರಯೋಗಾಲಯ ಸಿಬ್ಬಂದಿ, ಔಷಧ ಅಂಗಡಿ ಮಾಲೀಕರು ಬೆಂಬಲ ಕೊಡಲು ಪ್ರಮುಖ ಕಾರಣ, ಸಚಿವರಾಗಿದ್ದ ಶ್ರೀ ಕೆ. ಆರ್. ರಮೇಶ್ ಕುಮಾರ್ ರವರು ಅನೇಕ ಉಚಿತವಾದ ಆರೋಗ್ಯ ಸೌಲಭ್ಯಗಳನ್ನು ಸರ್ಕಾರಿ ಅಸ್ಪತ್ರೆಗಳಲ್ಲಿ ಕಾರ್ಯಾರಂಭ ಮಾಡಿದ್ದರು. ಇದರಿಂದ ಖಾಸಗಿಯಾಗಿಟ್ಟುಕೊಂಡಿರುವ ಎಲ್ಲಾರಿಗೂ ಅವರ ಆದಾಯದ ಮೇಲೆ ಹೊಡೆತ ಬೀಳುತಿತ್ತು ಎಂಬುದು ಗಮರ್ನಾಹವಾದದ್ದು.

ಮತ್ತೊಂದು ದೃಷ್ಠಿಕೋನದಲ್ಲಿ ನೋಡುವುದಾದರೇ, ಸಂಘಟಿತರು ಬಹುಬೇಗನೆ ಒಂದೆಡೆ ಸೇರಿ ತಮ್ಮ ಪ್ರಭಾವವನ್ನು ಸರ್ಕಾರದ ಮೇಲೆ ಬೀರಿದರು. ಆದರೇ ಅಸಂಘಟಿತರು ಈ ರೀತಿಯಾಗಿ ತಮಗೆ ಆಗುವ ಸಮಸ್ಯೆಗಳನ್ನು– ನಷ್ಟವನ್ನು ಒಂದೆಡೆ ಸೇರಿ ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರೇ ಈ ಕಾಯಿದೆ ಅಸಂಘಟಿತರಿಗೆ ಧ್ವನಿ ಕೊಡುವ, ಹಕ್ಕನ್ನು ಗುರ್ತಿಸುವ. ಅನ್ಯಾಯವನ್ನು ಹೇಳಿಕೊಳ್ಳಲು ಒಂದು ವ್ಯವಸ್ಥೆಯನ್ನು ರೂಪಿಸಿತು. ಒಂದು ವೇದಿಕೆಯನ್ನು ಕಲ್ಪಿಸಿತು ಎಂದು ಹೇಳಬಹುದಾಗಿದೆ.

**ವೈದ್ಯಕೀಯ ನಿರ್ಲಕ್ಷ್ಯ ಪ್ರಕರಣಗಳು**

ವೈದ್ಯಕೀಯ ನಿರ್ಲಕ್ಷ್ಯ ಅನ್ನುವುದು ಜಾಗತಿಕವಾಗಿ ಕಾಡುತ್ತಿರುವ ಸಮಸ್ಯೆಯಾಗಿದೆ. 'ವಿಶ್ವ ಆರೋಗ್ಯ ಸಂಸ್ಥೆಯ' ವರದಿಯಂತೆ ವರ್ಷಕ್ಕೆ 30 ಲಕ್ಷ ಸಾವುಗಳು ಇದರಿಂದ ಸಂಭವಿಸುತ್ತಿವೆ. ಇಂಥ ಸಾವುಗಳಲ್ಲಿ ಶೇ.50 ರಷ್ಟು ತಡೆಯಬಹುದಾಗಿದೆ ಎಂದು ತಿಳಿಸುತ್ತದೆ. 2017 ರಿಂದ 2022 ವರೆಗೆ ಭಾರತದಲ್ಲಿ 1019, ಕರ್ನಾಟಕದಲ್ಲಿ 30 ಮಂದಿ ಮೃತಪಟ್ಟಿದ್ದಾರೆ.[8] ವೈದ್ಯಕೀಯ ನಿರ್ಲಕ್ಷ್ಯದ ದೂರುಗಳು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ವಿರುದ್ಧ ಕಂಡುಬರುತ್ತವೆ. ಆದರೇ ಹೆಚ್ಚು ವರದಿಗಳು ಖಾಸಗಿ ವಲಯದಿಂದ ಬರುತ್ತವೆ. ಏಕೆಂದರೇ ಕೆಲವು ಖಾಸಗಿ ಆಸ್ಪತ್ರೆಗಳು ಹಣ ದಾಹದಿಂದ ಅನಗತ್ಯ ಪರೀಕ್ಷೆಗಳನ್ನು ಮಾಡಿ ರೋಗಿಗಳಿಂದ ಹೆಚ್ಚು ಶುಲ್ಕವನ್ನು ವಸೂಲಿ ಮಾಡುತ್ತಾರೆ. ಹಾಗೆಯೇ ಅನಗತ್ಯ ಚಿಕಿತ್ಸೆ ನೀಡುವುದರಿಂದ ರೋಗಿಗಳು ಅಡ್ಡಪರಿಣಾಮಗಳಿಗೆ ಗುರಿಯಾಗುತ್ತಾರೆ. ಕೆಲವೊಮ್ಮೆ ಸಾವಿಗೀಡಾಗುತ್ತಾರೆ. ಮೈಸೂರಿನ ಕುವೆಂಪು ನಗರದ ನಿವಾಸಿ ಕೆ. ಶಂಕರನಾರಾಯಣ್‌ರವರ ಸಾವು (2015) ವೈದ್ಯಕೀಯ ನಿರ್ಲಕ್ಷ್ಯವೆ ಕಾರಣವೆಂದು 2023 ರಲ್ಲಿ ಸಾಬೀತಾಗಿದ್ದರಿಂದ, ಮೈಸೂರಿನ ಜಿಲ್ಲಾ ಗ್ರಾಹಕ ನ್ಯಾಯಾಲವು ವಿಕ್ರಮ್ ಜ್ಯೋತ್ ಆಸ್ಪತ್ರೆಯ ವೈದ್ಯರಾದ ಡಾ. ರಾಜ್‌ಕುಮಾರ್ ವಾಧ್ವಾ, ಮತ್ತು ಡಾ. ಎನ್. ರಾಘವೇಂದ್ರ ರವರಿಗೆ 8 ಲಕ್ಷ ರೂಪಾಯಿಗಳನ್ನು ದಂಡ ವಿಧಿಸಿದೆ.[9] ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯಿದೆಯನ್ನು (ಕೆ.ಪಿ.ಎಂ.ಇ. ಆ್ಯಕ್ಟ್) ಉಲ್ಲಂಘಿಸಿದ್ದರಿಂದ ಮಾರ್ಚ್ 2025 ರಲ್ಲಿ ಬೆಂಗಳೂರಿನ 39 ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ 7.35 ಲಕ್ಷ ರೂ.ಗಳನ್ನು ದಂಡವಾಗಿ ವಿಧಿಸಲಾಗಿದೆ.[10] ಹಾಗೆಯೇ ಜುಲೈ 2025 ರಲ್ಲಿ ಬೆಂಗಳೂರಿನ 14 ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ 6.15 ಲಕ್ಷ ರೂ.ಗಳನ್ನು ದಂಡ ಹಾಕಲಾಗಿದೆ ಮತ್ತು 5 ಆಸ್ಪತ್ರೆಗಳ ವಿರುದ್ಧ ಎಫ್.ಐ.ಆರ್ ದಾಖಲಾಗಿದೆ.[11] ಈ ರೀತಿಯ ವರದಿಗಳನ್ನು ಸಾಮಾನ್ಯವಾಗಿ ದೃಶ್ಯ

ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಕಾಣುತ್ತೇವೆ. ಇಂತಹ ಅನೇಕ ದೂರುಗಳನ್ನು ಶ್ರೀ ಕೆ.ಆರ್. ರಮೇಶ್ ಕುಮಾರ್ ರವರು ತಮ್ಮ ರಾಜಕೀಯ ಜೀವನದಲ್ಲಿ ಕಂಡಿದ್ದರು. ಅವರ ಧ್ಯೇಯ ವಾಕ್ಯ 'ಜೀವ ಅಮೂಲ್ಯ' ಅದಕ್ಕೆ ಮೊದಲ ಪ್ರಾಶಸ್ತ್ಯ ನೀಡಬೇಕು ಎನ್ನುವುದಾಗಿತ್ತು. ಮೊದಲು ಸೇವೆ ಆನಂತರ ಹಣ ಎಂಬುದು ಅವರ ನಿಲುವಾಗಿತ್ತು. ಇದು ಕಾರ್ಪೋರೇಟ್ ಆಸ್ಪತ್ರೆಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಹಾಗಾಗಿ ನಿರ್ಲಕ್ಷ್ಯದ ಪ್ರಕರಣಗಳಿಗೆ ಕಡಿವಾಣ ಹಾಕಲು, ಈಗಾಗಲೇ ಜಾರಿಯಲ್ಲಿರುವ ಕಾಯಿದೆಯನ್ನು ಮತ್ತಷ್ಟು ಬಲಿಷ್ಠಗೊಳಿಸಿ ಜನಪರವಾಗಿಸಲು 2017 ರಲ್ಲಿ ತಿದ್ದುಪಡಿ ತರಲು ಮುಂದಾದರು. ಇದರಿಂದ ತೀವ್ರವಾದ ಪ್ರತಿರೋಧ ಎದುರಿಸಿದರು, ಕೊನೆಗೂ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದಿಯನ್ನು (ಕೆ.ಪಿ.ಎಂ.ಇ. ಆ್ಯಕ್ಟ್) ಸದನದಲ್ಲಿ ಅನುಮೋದನೆ ಪಡೆಯುವಲ್ಲಿ ಬಹುತೇಕ ಯಶಸ್ವಿಯಾದರು.[12] ಆದರೆ ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಸರಿಯಾಗಿ ಅನುಷ್ಠಾನ ಮಾಡಲಿಲ್ಲ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ, ಈ ಕಾಯ್ದೆಯು ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮತ್ತು ವೃತ್ತಿ ಗೌರವವನ್ನು ಅಧಿಕೃತಗೊಳಿಸುವಂತಹ ಕಾಯಿದೆಯಾಗಿದೆ. ಶ್ರೀ ಕೆ.ಆರ್. ರಮೇಶ್ ಕುಮಾರ್ ರವರು ಸಾಮಾನ್ಯ ಜನರ ನೋವು, ಆಕ್ರನಂದನ, ಅಳಲು, ಮಾನಸಿಕ ಹಿಂಸೆಗೆ ಈ ಕಾಯ್ದೆಯ ಮೂಲಕ ಪರಿಹಾರ ಕಲ್ಪಿಸುವ ಕೆಲಸ ಮಾಡಿದ್ದಾರೆ. ಹಾಗೆಯೇ ಖಾಸಗಿ ಆರೋಗ್ಯ ಕ್ಷೇತ್ರದಲ್ಲಿ ಆಗುವ ಸುಲಿಗೆ, ದಂಧೆಯನ್ನು ನಿಯಂತ್ರಿಸಿ ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಆರೋಗ್ಯ ಸೌಲಭ್ಯಗಳನ್ನು ದೊರಕಿಸುವ ಪ್ರಯತ್ನವನ್ನು ಈ ಕಾಯಿದೆಯಲ್ಲಿ ಮಾಡಿರುವುದನ್ನು ಗುರುತಿಸಬಹುದಾಗಿದೆ.

ಈ ಕಾಯ್ದೆಯು ಇಷ್ಟೆಲ್ಲಾ ಜನಪರವಾಗಿದ್ದರೂ ಸರ್ಕಾರಿ–ಖಾಸಗಿ ಸಹಭಾಗಿತ್ವದ ಮೂಲಕ ಜನರ ಆರೋಗ್ಯ ಮಟ್ಟವನ್ನು ಹೆಚ್ಚಿಸುವ ದಿಕ್ಸೂಚಿಯನ್ನು ಒಳಗೊಂಡಿದ್ದರೂ ಅನೇಕ ದೋಷಗಳಿಂದ ಮುಕ್ತವಾಗಿಲ್ಲ ಪ್ರಮುಖವಾಗಿ ಖಾಸಗಿ ವೈದ್ಯಕೀಯ ಸಂಸ್ಥೆಗಳು ಸರ್ಕಾರದ ಆರೋಗ್ಯ ಯೋಜನೆಗಳ ಮೂಲಕ ಚಿಕಿತ್ಸೆ ಕೊಡಲು ಉತ್ತಮವಾಗಿ ಸ್ಪಂದಿಸದೆ ಇರುವುದು, ವೈದ್ಯಕೀಯ ನಿರ್ಲಕ್ಷ್ವದ ಪ್ರಕರಣಗಳು ಮತ್ತು ಅನಗತ್ಯ ಹೆಚ್ಚಿನ ದರಗಳು ವಿಧಿಸುವ ಬಗ್ಗೆ ವರದಿಗಳು ಬರುವುದು ಸಾಮಾನ್ಯವಾಗಿದೆ. ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳ ವಿಚಾರಣೆಯು ದೀರ್ಘಕಾಲಿಕವಾಗಿ ನಡೆಯುವುದರಿಂದ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಪರೋಕ್ಷವಾಗಿ ಸಹಕಾರಿಯಾಗಿದೆ. ಸಂಬಂಧಪಟ್ಟ ಇಲಾಖೆಯು ಈ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿದೆ ಎನ್ನಬಹುದು.

ಅನೇಕ ದೋಷಗಳನ್ನು ಈ ಕಾಯ್ದೆ ಒಳಗೊಂಡಿದ್ದರೂ ಆರೋಗ್ಯ ಕ್ಷೇತ್ರದ ಸುಧಾರಣೆಗಾಗಿ ತಂದಂತಹ ಕ್ರಾಂತಿಕಾರಕ ಕಾಯಿದೆ ಎನ್ನಬಹುದು. ಈ ಕಾಯ್ದೆಯಿಂದ ಲಕ್ಷಾಂತರ ರೋಗಿಗಳು ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಆರೋಗ್ಯ ಸೌಲಭ್ಯಗಳನ್ನು ಪಡೆದುಕೊಂಡಿರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಭಾರತದಲ್ಲಿ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಈ ಸ್ವರೂಪದ ಕಾಯಿದೆ ರೂಪುಗೊಂಡಿದ್ದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ. ಅದರ ಕೀರ್ತಿ ಅಂದಿನ ಆರೋಗ್ಯ ಸಚಿವರಾಗಿದ್ದ ಶ್ರೀ ಕೆ. ಆರ್. ರಮೇಶ್ ಕುಮಾರ್ ರವರಿಗೆ ಸಲ್ಲುತ್ತದೆ.

**ಪರಾಮರ್ಶನ ಗ್ರಂಥಗಳು**


- ಕರ್ನಾಟಕ ರಾಜ್ಯ ಬಜೆಟ್ ಫೆಬ್ರವರಿ 2018–19.
- ಸುವರ್ಣ ನ್ಯೂಸ್ ಚರ್ಚೆ. (2017 ಜೂನ್, 22). *KPME ಕಾನೂನು– ಸೇವೆ v/s ಸುಲಿಗೆ*

- Government of Karnataka, Health and Family Welfare Department. (2016, October 7). *Proceedings of the Karnataka Private Medical Establishments (Amendment) Act, 2017: Rules-making committee meeting held under the chairmanship of the Principal Secretary, Health and Family Welfare Department, Bangalore.*
- Government of Karnataka, Health and Family Welfare Department. (2016, November 19). *Proceedings of the Karnataka Private Medical Establishments (Amendment) Act, 2017: Draft committee meeting held under the chairmanship of the Principal Secretary, Health and Family Welfare Department, Bangalore.*
- Government of Karnataka, Health and Family Welfare Department. (2017, May 18). *Minutes of the meeting on the Karnataka Private Medical Establishments (Amendment) Act, 2017 rules held under the chairmanship of the Principal Secretary, Health and Family Welfare Department, Bangalore.*


**ಕೊನೆ ಟಿಪ್ಪಣಿ**

---

[1] ಸಂದರ್ಶನ: ಶ್ರೀ ಕೆ.ಆರ್. ರಮೇಶ್ ಕುಮಾರ್, ದಿನಾಂಕ 24 ಮೇ 2022.

[2] ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 28–07–2016 ರಂದು ನಡೆದ ಸಭೆಯ ನಡಾವಳಿ.

[3] ಸರ್ಕಾರದ ಆದೇಶ ಸಂಖ್ಯೆ:ಆಕುಕ 115ಎಫ್‌ಪಿಆರ್ 2016, ಬೆಂಗಳೂರು, ದಿನಾಂಕ: 12–09–2016.

[4] ಕರ್ನಾಟಕದ 14ನೇ ವಿಧಾನಸಭೆ, 14ನೇ ಅಧಿವೇಶನದ ಜೂನ್ 20, 2017 (ತಿದ್ದುಪಡಿಯಾಗದ ಪ್ರತಿ) ಪುಟ 30–31.

[5] ಮೇಲಿನದೇ, ಪುಟ 162–164

[6] ಕರ್ನಾಟಕದ 14ನೇ ವಿಧಾನಸಭೆ, 15ನೇ ಅಧಿವೇಶನದ ನವೆಂಬರ್ 22, 2017(ತಿದ್ದುಪಡಿಯಾಗದ ಪ್ರತಿ) ಪುಟ 208–209.

[7] 2018 ರ ಕರ್ನಾಟಕ ಅಧಿನಿಯಮ ಸಂಖ್ಯೆ: 01, 06 ಜನವರಿ 2018 ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆ.

[8] ಪ್ರಜಾವಾಣಿ ಪತ್ರಿಕೆ ದಿನಾಂಕ 27 ಜುಲೈ 2024 ಪುಟ–7

[9] http://www.udayavani.com/english-news/mysuru-two-doctors-fineded-rs-8-lakhs-for- medical-negligence

[10] http://medicaldialogues,in/news/heaith/hosspital-diagnostics/39-medical -establishment-fined-for-violating-kpme-act

[11] ಪ್ರಜಾವಾಣಿ ದಿನಪತ್ರಿಕೆ ದಿನಾಂಕ 24 ಜುಲೈ 2025 ಪುಟ–3.

[12] ಸಂದರ್ಶನ: ಶ್ರೀ ಕೆ.ಆರ್. ರಮೇಶ್ ಕುಮಾರ್, ದಿನಾಂಕ 12 ಡಿಸೆಂಬರ್ 2023